# ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಜೈವಿಕ ನಿಯಂತ್ರಕಗಳ ಉತ್ಪಾದನಾ ಪ್ರಯೋಗಾಲಯ (Bio Control lab) ಸಹಾಯಧನ ನೀಡಲು ಅನುಸರಿಸಬೇಕಾದ ಮಾರ್ಗಸೂಚಿಗಳು:

ಜೈವಿಕ ನಿಯಂತ್ರಕ ಉತ್ಪಾದನ ಘಟಕಗಳನ್ನು ಸ್ಥಾಪಿಸುವ ಮೂಲಕ ಜೈವಿಕ ವಿಧಾನದಿಂದ ಪೀಡೆ ನಿಯಂತ್ರಣ ಸಾಧಸುವುದು ಇಂದಿನ ದಿನಗಳ ಅವಶ್ಯಕತೆಯಾಗಿರುತ್ತದೆ .ಇಂತಹ ಘಟಕಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪಿಸಲು ಮುಂದು ಬರುವ ಸಂಸ್ಥೆಗಳ ಆರ್ಥಿಕ ನೆರವು ನೀಡುವ ಉದ್ದೇಶದಿಂದ ಈ ಸಹಾಯಧನವನ್ನು ಸಮಗ್ರ ತೋಟಗಾರಿಕೆ ಅಬಿವೃದ್ಧಿ ಯೋಜನೆಯ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಉಪಯೋಜನೆಯಡಿ ನೀಡಲಾಗುತ್ತಿದೆ.

ಈ ಘಟಕದ ಅನುದಾನವನ್ನು ಸರ್ಕಾರ/ ಸರ್ಕಾರೇತರ ಸಂಘ ಸಂಸ್ಥೆಗಳು / ಖಾಸಗಿಯವರಿಗೆ ಜೈವಿಕ ಗೊಬ್ಬರ / ಜೈವಿಕ ನಿಯಂತ್ರಕಗಳ ಉತ್ಪಾದನೆಗೆ ಅಗತ್ಯವಿರುವ ಮೂಲ ಸೌಕರ್ಯವನ್ನು ನಿರ್ಮಿಸಿಕೊಳ್ಳಲು ಉಪಯೋಗಿಸಬಹುದು.

ಸಾರ್ವಜನಿಕ ವಲಯದ ಸಂಸ್ಥೆಗಳಿಗೆ ಶೇ 100 ರಷ್ಟು ಅಂದರೆ, ರೂ 90.00 ಲಕ್ಷಗಳ ಸಹಾಯಧನ ನೀಡಲಾಗುತ್ತಿದೆ ಹಾಗೂ ಖಾಸಗಿ ವಲಯದ ಸಂಸ್ಥೆಗಳಿಗೆ ಶೇ 50 ರಷ್ಟು ಅಂದರೆ, ರೂ 45.00 ಲಕ್ಷಗಳ ಸಹಾಯಧನ ನೀಡಲಾಗುತ್ತದೆ.

**ಜೈವಿಕ ನಿರ್ವಹಣ ಘಟಕದ ಅಂದಾಜು ವೆಚ್ಚದ ವಿವಿರ:**

(ರೂ. ಲಕ್ಷಗಳಲ್ಲಿ)

| Sl. No | Components | Estimated Cost |
|---|---|---|
| 1 | Building – Construction of laboratory Building (partition walls, Flooring, Plumbing, Piping, Ducting, Electrical Miscellaneous (fire alarm, Data system, Furniture's and fit outs) | 46.00 |
| 2 | Plant & Meachinary | |
| | Vertical Autoclave, Hot air Oven, Refrigerator, BOD Incubator, Laminar air flow work station, working table, Rotary shaker (capable of holding 25 No. flasks of 100-150 ml capacity), Electronic top loading balance, Biofermentor, Sterio Zoom Microscope, pH Meter and conductivity meter, Oil free air compressor, Air conditioners, Mixing Machine, Water | 42.00 |

| | | |
|---|---|---|
| | Purification, Glassbead sterilizer, Moisture analyzer, Computer with accessories | |
| 3 | Miscellaneous (colony counter, balances. micro liter pipettes/ Deionizer, Glassware and plastic ware | 2.00 |
| | **Total** | 90.00 |

**ಪ್ರಸ್ತಾವನೆಯೊಂದಿಗೆ ಸಲ್ಲಿಸಬೇಕಾದ ದಾಖಲೆಗಳ ವಿವರ:**

- ಜೈವಿಕ ನಿರ್ವಹಣಾ ಪ್ರಯೋಗಾಲಯ ನಿರ್ಮಿಸಲು ಉದ್ದೇಶಿಸುವ ಫಲಾನುಭವಿಯ ಹೆಸರಿನಲ್ಲಿ ಜಮೀನು ಹೊಂದಿರಬೇಕು.ಸದರಿ ಜಮೀನು ಕೃಷಿಯೇತರ ಪ್ರಯೋಗಕ್ಕಾಗಿ ಪರಿವರ್ತನೆಯಾಗಿರಬೇಕು. ಪ್ರಯೋಗಾಲಯ ನಿರ್ಮಾಣಕ್ಕೆ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದುಕೊಳ್ಳುವುದು.
- ಪ್ರಯೋಗಾಲದ ನಿರ್ಮಾಣಕ್ಕೆ ರಾಷ್ಟ್ರೀಕೃತ ಬ್ಯಾಂಕ್ ನಿಂದ ಸಾಲ ಪಡೆದಿರುವ ಸಾಲ ಮಂಜೂರಾತಿ ಪತ್ರ ಹಾಗೂ appraisal letter ನೀಡುವುದು.
- ಖಾಸಗಿ ವಲಯದಲ್ಲಿ ಪ್ರಯೋಗ ಶಾಲೆಯನ್ನು ಸ್ಥಾಪಿಸಲು ಆಸಕ್ತಿ ಉಳ್ಳವರು ಈ ವಿಭಾಗದಲ್ಲಿ ಪರಿಣತಿ ಹೊಂದಿರಬೇಕು ಅಥವಾ ಪರಿಣತಿ ಹೊಂದಿರುವ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವುದು. ನೇಮಕ ಮಾಡಿಕೊಳ್ಳುವ ಸಿಬ್ಬಂದಿಯ ವಿಧ್ಯಾರ್ಹತೆ ಹಾಗೂ ಅನುಭವದ ವಿವರ ನೀಡುವುದು.
- ಪ್ರಯೋಗಾಲದಲ್ಲಿ ಉತ್ಪಾದಿರುವ ಜೈವಿಕ ಪರಿಕರಗಳಿಂದ ಸುತ್ತಮತ್ತಲಿನ ಪ್ರದೇಶದಲ್ಲಿ ಕಾಣಿಸಿಕೊಳ್ಳುವ ಯಾವ ಯಾವ ರೋಗ/ಕೀಟಗಳ ನಿಯಂತ್ರಣಕ್ಕೆ ಅನುಕೂಲವಾಗುತ್ತದೆ ಎಂಬ ವಿವರ ನೀಡುವುದು.
- ಪ್ರಯೋಗಾಲಯದ ಕಟ್ಟದ ಅಂದಾಜು ವೆಚ್ಚ ಹಾಗೂ ನಕ್ಷೆಯನ್ನು ನೊಂದಾಯಿತ ಇಂಜಿನಿಯರ್ ಅಥವಾ Architect ಅಥವಾ ಸರ್ಕಾರದ ಯಾವುದೇ ಇಲಾಖೆಯ ಇಂಜಿನಿಯರ್ ರವರಿಂದ ಧೃಡೀಕರಿಸುವುದು ಕಡ್ಡಾಯ.
- ಪ್ರಯೋಗಾಲಯವನ್ನು ಸದರಿ ಜಾಗದಲ್ಲಿ ನಿರ್ಮಿಸುತ್ತಿರುವುದ್ದರಿಂದ ಆಗುವ ಸಾಮಾಜಿಕ ಪ್ರಯೋಜನಗಳು ಹಾಗೂ ಸುತ್ತಲಿನ ಯಾವ ಪ್ರದೇಶಗಳಿಗೆ ಯಾವ ರೀತಿ ಅನುಕೂಲವಾಗುತ್ತದೆ ಎಂಬ ವಿವರ.

- ಸದರಿ ಪ್ರಯೋಗಾಲಯದಲ್ಲಿ ಉತ್ಪಾದಿಸಲು ಬೇಕಾಗುವ ಜೈವಿಕ ಪರಿಕರಗಳ ಮೂಲ ತಂತ್ರಜ್ಞಾನದ(Protocol) ಹಂಚಿಕೆ ವಿವರಗಳು ಹಾಗೂ ಸಂಬಂಧಪಟ್ಟ ಸಂಸ್ಥೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆ ಪತ್ರ ನೀಡುವುದು.
- ಜೈವಿಕ ಪರಿಕರಗಳ ಉತ್ಪಾದನೆಗೆ Central Insecticide Board (CIB) ಯಲ್ಲಿ ನೊಂದಾಯಿಸಿಕೊಳ್ಳುವುದು ಕಡ್ಡಾಯ.
- ಪ್ರಯೋಗಾಲದಲ್ಲಿ ಉತ್ಪಾದಿಸುವ ಜೈವಿಕ ಪರಿಕರಗಳ ಪಟ್ಟಿ, ಪ್ರತಿ ಜೈವಿಕ ಪರಿಕರಗಳ ಉತ್ಪಾದನೆಗೆ ತಗಲುವ ವೆಚ್ಚ ಹಾಗೂ ರೈತರಿಗೆ ಯಾವ ದರದಲ್ಲಿ ಜೈವಿಕ ಪರಿಕರಗಳು ದೊರೆಯುತ್ತವೆ ಎಂಬ ವಿವರ.
- ಸದರಿ ಪ್ರಯೋಗಾಲಯದ ಆರ್ಥಿಕ ಸುಸ್ಥಿರತೆ/ ಆದಾಯವನ್ನು ಕಾಪಾಡಿಕೊಳ್ಳಲು ನಿಗಧಿಪಡಿಸಿಕೊಂಡಿರುವ ಮಾನದಂಡಗಳು.
- ಸದರಿ ಪ್ರಯೋಗಾಲಯದ ವಿವಧ ಕಟ್ಟಡದ ಕಾಮಾಗಾರಿ ಹಾಗೂ ಉಪಕರಣಗಳ ಖರೀದಿಯ ಅನುಷ್ಠಾನ ವೇಳಾ ಪಟ್ಟಿ
- ಸದರಿ ಪ್ರಯೋಗಾಲಯಕ್ಕೆ ಕೇಂದ್ರ/ರಾಜ್ಯ ಸರ್ಕಾರದ ಇತರೇ ಯಾವುದೇ ಕಾರ್ಯಕ್ರಮದಡಿ ಸಹಾಯಧನ ಪಡೆದುಕೊಂಡಿರುವುದಿಲ್ಲ ಎಂಬುದನ್ನು ರೂ .100 ಛಾಪಾ ಕಾಗದದಲ್ಲಿ ಬರೆದುಕೊಟ್ಟ ಮುಚ್ಚಳಿಕೆ ಪತ್ರ.
- ವಾಯುಮಾಲಿನ್ಯ ನಿಯಂತ್ರಣ ಮಂಡಳಿಯಿಂದ NOC ಪಡೆದುಕೊಳ್ಳಬೇಕು.
- ಪ್ರಯೋಗಾಲಯದ ಪ್ರಸ್ತಾವನೆಯಲ್ಲಿ ತಿಳಿಸುವ ಉಪಕರಣಗಳ ಬಿಲ್ಲು / ಕೋಟೆಷನ್ ನೀಡುವುದು.
- ಸಾರ್ವಜನಿಕ ವಲಯದ ಪ್ರಸ್ತಾವನೆಯಗಿದ್ದಲ್ಲಿ ಜೈವಿಕ ನಿರ್ವಹಣಾ ಪ್ರಯೋಗಾಲಯ ಪ್ರತಿ ವರ್ಷ ವಿಶ್ಲೇಷನೆಗೆ ಅವಶ್ಯಕವಿರುವ Recurring Cost ಗಳಾದ ರಾಸಾಯನಿಕ ವಸ್ತುಗಳ ಖರೀದಿಗೆ, ವಿದ್ಯುತ್ ಸೌಲಭ್ಯಕ್ಕೆ ಸಿಬ್ಬಂದಿಗಳ ವೇತನ ಹಾಗೂ ಇತರೇ ವೆಚ್ಚಕ್ಕೆ ತಗಲುವ ವೆಚ್ಚವನ್ನು ಭರಿಸಲು ಸಂಬಂಧಿಸಿದ ಸಂಶೋದನಾ ಸಂಸ್ಥೆಯು MOU ನೀಡುವುದು.
- SWOT Analysis
- Backward and Forward linkage
- Economic feasibility of the Project(IRR, NPW, Break even point, DSER,DER, Benefit Cost Ratio, Profitability Statement)
- Investment certificate from Registerted Charted Accountant.

**ಸಹಾಯಧನ ವಿತರಣೆ:**

- ಜೈವಿಕ ನಿಯಂತ್ರಣ ಪ್ರಯೋಗಾಲಯದ ಕಾಮಗಾರಿ ಪೂರ್ಣಗೊಂಡಿರುವ ಬಗ್ಗೆ ಪ್ರಸ್ತಾವನೆಯಲ್ಲಿ ನೀಡಿರುವ ಎಲ್ಲಾ ಉಪಕರಣಗಳನ್ನು ಅಳವಡಿಸಿಕೊಂಡಿರುವ ಬಗ್ಗೆ ಜಿಲ್ಲಾ ಮಟ್ಟದ ತಾಂತ್ರಿಕ ಸಮಿತಿಯು ಸ್ಥಳ ಪರಿಶೀಲನೆ ಮಾಡಿ ಖಚಿತ ಪಡಿಸಿಕೊಂಡ ನಂತರವೇ ಅಂತಿಮ ವಾಗಿ ಸಹಾಯಧನವನ್ನು ಬಿಡುಗಡೆ ಮಾಡುವುದು.
- ಫಲಾನುಭವಿಯು ಸಹಾಯಧನ ಪಡೆದಿರುವ ಬಗ್ಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಲೋಗೋ (Logo) ದೊಂದಿಗೆ ಸಂಕ್ಷಿಪ್ತ ವಿವರಗಳುಳ್ಳ ನಾಮಫಲಕವನ್ನು ಕಡ್ಡಾಯವಾಗಿ ಜೈವಿಕ ನಿರ್ವಹಣಾ ಘಟಕ ಮುಂಬಾಗದಲ್ಲಿ ಪ್ರದರ್ಶಿಸಬೇಕು.
- ಈ ಕಾರ್ಯಕ್ರಮವು Credit linked back ended subsidy ಯಾಗಿದ್ದು, ಸಹಾಯಧನದ ಮೊತ್ತವನ್ನು ಮಾರ್ಗಸೂಚಿಯ ಪ್ರಕಾರ ಬ್ಯಾಂಕ್ ಸಾಲದ ಖಾತೆಗೆ ಜಮಾ ಮಾಡುವುದು.

**ಆರ್ಥಿಕ ಪ್ರತ್ಯಾ ಯೋಜನೆ (Delegation of power):**

- NHM ಯೋಜನೆಯ ಮಾರ್ಗಸೂಚಿಯಂತೆ ರೂ. 90.00 ಲಕ್ಷಗಳವರೆಗೆ ತೋಟಗಾರಿಕೆ ಮಿಷನ್ ನಿರ್ದೇಶಕರಿಗೆ ಅವಕಾಶ ಇರುತ್ತದೆ. ಆದರಿಂದ ಜಿಲ್ಲಾಮಟ್ಟದಲ್ಲಿ ಪರಿಶೀಲಿಸಿ, ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಕಳುಹಿಸುವುದು.
- ಅಂತಿಮ ಪ್ರಗತಿ ವರದಿ, ಯಶೋಗಾಥೆಗಳು ಮತ್ತು ಯೋಜನೆಯ ಅನುಷ್ಠಾನದಿಂದ ಆಗುವ ಪ್ರಯೋಜನೆಗಳನ್ನು (ಲಿಖಿತ, ದೃಶ್ಯ ಮತ್ತು ಶ್ರವಣ) ಸಾಫ್ಟ್ ಕಾಪಿ ಮತ್ತು ಹಾರ್ಡ್ ಕಾಪಿಯನ್ನು ಕಾರ್ಯನಿರ್ವಾಹಕ ನಿರ್ದೇಶಕರು ಮತ್ತು ತೋಟಗಾರಿಕೆ ಉಪ ನಿರ್ದೇಶಕರು (ತೋಟಗಾರಿಕೆ ಮಾಹಿತಿ ಕೇಂದ್ರ) ರವರಿಗೆ KSHMA ಮತ್ತು ತೋಟಗಾರಿಕೆ ಉಪ ನಿರ್ದೇಶಕರವರಿಗೆ ಸಲ್ಲಿಸುವುದು.

**ಮಿಷನ್ ನಿರ್ದೇಶಕರು**

**ಹಾಗೂ**

**ತೋಟಗಾರಿಕೆ ನಿರ್ದೇಶಕರು**

## Check List

| | |
|---|---|
| 1 | Name of the Project |
| 2 | Type of Activity |
| 3 | Name and Address of the Head of the Institute |
| 4 | Information Regarding Principal Investigator |
| 5 | Implementing Agency and location |
| 6 | Objectives |
| 7 | Brief background of the project |
| 8 | Cost of the project including Plant and Machinery. |
| 9 | Details of the Building construction and the cost duly certified. |
| 10 | Location of the project and availability of building for the purpose with documents |
| 11 | Findings of any study in support for creating a facility in the area |
| 12 | Area of operation with special reference to NHM Districts |
| 13 | Details of diseases and pests prevalent in the area |
| 14 | Bio-control agents to be multiplied in the lab with clear details of protocols established in each case |
| 15 | Source of initial material |
| 16 | Laboratory should be located in an area, which is easily accessible to farmers |
| 17 | Approximate cost per unit of bio-control agent that will be available to farmer |
| 18 | List of Districts, Taluks and Villages to be covered by the activity |
| 19 | No. of farmers to be benefited |
| 20 | Economics of project vis-à-vis unit cost, profitability and cost at which inputs will be made available to farmers. Total requirement of biocontrol agents. Capacity of production. |
| 21 | Certificate stating that the subsidy other than NHM has not been availed |
| 22 | Social benefits |
| 23 | Commitment of the organization for deployment of experts and staff to this project for continuity and accountability |
| 24 | Details of the sustainability of the project with special reference to its capacity to generate income, as only one time grant is available |
| 25 | SWOT analysis |
| 26 | Implementation schedule |
| 27 | Cost Benefit Ratio |
| 28 | Bank loan sanction and appraisal letter |
| 29 | Subsidy recommended by DDH |